# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ

## ಕೆ.ಆರ್.ನಗರ

## ಸಿ.ಸಿ.190/2017

**ಪಿಡಬ್ಲ್ಯೂ-1**

**ಸಿಡಬ್ಲ್ಯೂ-2**

| | | |
|---|---|---|
| ಸಾಕ್ಷಿದಾರರ ಹೆಸರು | - | ಶಶಿಕುಮಾರ್ |
| ತಂದೆಯ ಹೆಸರು | - | ಲೇಟ್ ಬಸವೇಗೌಡ |
| ವಯಸ್ಸು | - | 29 |
| ಕೆಲಸ | - | ವಾಟರ್ ಮೆನ್ |
| ವಾಸ | - | ಕೆಡಗ, ಕೆ ಆರ್ ನಗರ ತಾಲ್ಲೂಕು |

**ದಿನಾಂಕ 10-03-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ನಾನು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಈ ಹಿಂದೆ ನೋಡಿರುವುಲ್ಲ. ನಾನು ಯಾವುದೇ ಅಪಘಾತವನ್ನು ಪ್ರತ್ಯಕ್ಷ ನೋಡಿರುವುದಿಲ್ಲ. ನನಗೆ ಈ ಪ್ರಕರಣದ ಯಾವುದೇ ಮಾಹಿತಿ ಇರುವುದಿಲ್ಲ. ಸಾಕ್ಷಿಗೆ ತೋರಿಸಿದ ಫೋಟೋಗಳನ್ನು ನೋಡಿ ಗುರುತಿಸಿರುವುದಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

ಪಾಟೀ ಸವಾಲು ಮಾನ್ಯ ಎಪಿಪಿಯವರಿಂದ

ದಿ:06.09.2016 ರಂದು ಸಂಜೆ ಸುಮಾರು 06.00 ಗಂಟೆ ಸಮಯಕ್ಕೆ ಸಾಲಿಗ್ರಾಮ ಕೆರೆಯ ಬಳಿ ಸಾಲಿಗ್ರಾಮ ಬೇರ್ಯಾ ರಸ್ತೆಯ ಕಡೆಗೆ ನನ್ನ ಮುಂದೆ ಒಬ್ಬ ಹುಡುಗ ತನ್ನ ಮೋಟರ್ ಸೈಕಲ್ನಲ್ಲಿ ಸಾಲಿಗ್ರಾಮದ ಕಡೆಗೆ ಹೋಗುತ್ತಿದ್ದಾಗ ಎದುರುಗಡೆಯಿಂದ ಮತ್ತೊಬ್ಬ ಮೋಟಾರು ಸೈಕಲ್ ಚಾಲಕ ತನ್ನ ಮೋಟರ್ ಸೈಕಲನ್ನು ಅತೀ ವೇಗ ಹಾಗೂ ಅಜಾಗರೂಕತೆಯಿಂದ ರಸ್ತೆಯ ಬಲಭಾಗಕ್ಕೆ ಓಡಿಸಿಕೊಂಡು ಬಂದು ನನ್ನ ಮುಂದೆ ಹೋಗುತ್ತಿದ ಮೋಟರ್ ಸೈಕಲ್ಗೆ ಡಿಕ್ಕಿ ಪಡಿಸಿದರು ಎಂದರೆ ಸರಿಯಲ್ಲ. ಈ ರೀತಿ ಡಿಕ್ಕಿ ಪಡಿಸಿದ ಪರಿಣಾಮ ಎರಡೂ ಮೋಟರ್ ಸೈಕಲ್ಗಳು ಕೆಳಗೆ ಬಿದ್ದು ಜಖಂಗೊಂಡವು ಎಂದರೆ ಸರಿಯಲ್ಲ. ನಂತರ ನಾನು ಹತ್ತಿರ ಹೋಗಿ

ನೋಡಿದಾಗ ಒಂದು ಮೋಟಾರ್ ಸೈಕಲ್ ಚಾಲಕನ ಹೆಸರು ಧನುಷ್ ಆಗಿದ್ದು ಆತನ ತಲೆಗೆ, ಬಲ ತೊಡೆಗೆ ಹಾಗೂ ಮೂಗು ಮತ್ತು ಕಿವಿಗೆ ಗಾಯವಾಗಿ ರಕ್ತ ಬರುತ್ತಿತ್ತು ಎಂದರೆ ಸರಿಯಲ್ಲ. ಆತನ ಮೋಟಾರ್ ಸೈಕಲ್ ಸಂಖ್ಯೆ ಕೆ ಎ **09** ಹೆಚ್ ಜೆ **2631** ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಂತರ ಮತ್ತೊಬ್ಬ ಬೈಕ್ ಸವಾರನಿಗೂ ಸಣ್ಣ ಪುಟ್ಟ ಗಾಯಗಳಾಗಿದ್ದು ಆತನ ಮೊಟಾರ್ ಬೈಕ್ ನಂ.ಕೆಎ **45** ಡಬ್ಲ್ಯೂ **0260** ಆಗಿತ್ತು ಎಂದರೆ ಸರಿಯಲ್ಲ. ನಂತರ ಧನುಷನ್ನು ಕೂಡಲೇ ಸಾಲಿಗ್ರಾಮ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ಕರೆದುಕೂಂಡು ಹೋಗುವಾಗ ಮಾರ್ಗಮಧ್ಯೆ ತೀರಿಹೋದರು ಎಂಬ ವಿಚಾರ ನನಗೆ ತಿಳಿಯಿತು ಎಂದರೆ ಸರಿಯಲ್ಲ. ಸದರಿ ಧನುಷ್ ಮೃತ ಹೊಂದಲು ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯ ಅತೀವೇಗ ಹಾಗೂ ಅಜಾಗರೂಕತೆಯ ಬೈಕ್ ಚಾಲನೆಯೇ ಕಾರಣ ಎಂದರೆ ಸರಿಯಲ್ಲ. ಈಗ ಓದಿ ಹೇಳಿದ ಹೇಳಿಕೆಯ ಭಾಗವನ್ನು ನಿಪಿ **1** ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು -ಇರುವುದಿಲ್ಲ.

ಮರು ವಿಚಾರಣೆ -ಇರುವುದಿಲ್ಲ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಗಾಯತ್ರಿ)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ